# ಬಂದಿಗಳ ಅಧಿನಿಯಮ, 1900

(1900ರ ಅಧಿನಿಯಮ ಸಂಖ್ಯೆ 3)

**[3-9-2001ರ ಭಾರತ ರಾಜಪತ್ರದ IX ನೇ ಭಾಗದ, 1ನೇ ವಿಭಾಗದ, 18ನೇ ಸಂಪುಟದ, 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 8 ರಿಂದ 13ರ ವರೆಗಿನ ಪುಟಗಳಲ್ಲಿ ಪ್ರಕಟಿತ]**

**ಪ್ರಕರಣಗಳ ಅನುಕ್ರಮಣಿಕೆ**

**ಪ್ರಕರಣಗಳು :**

ಭಾಗ-**I**

ಪ್ರಾರಂಭಿಕ

1. ಚಿಕ್ಕ ಹೆಸರು ಮತ್ತು ವ್ಯಾಪ್ತಿ
2. ಪರಿಭಾಷೆಗಳು

ಭಾಗ-**II**

ಸಾಮಾನ್ಯ

3. ತಮ್ಮ ಅಭಿರಕ್ಷೆಗೆ ಕ್ರಮಬದ್ಧವಾಗಿ ಒಪ್ಪಿಸಿದ ವ್ಯಕ್ತಿಗಳನ್ನು ಬಂಧಿಸಿಡಲು ಬಂದೀಖಾನೆಗಳ ಪ್ರಭಾರದಲ್ಲಿರುವ ಅಧಿಕಾರಿಗಳು
4. ಬಂದೀಖಾನೆಗಳ ಪ್ರಭಾರದಲ್ಲಿರುವ ಅಧಿಕಾರಿಗಳು ರಿಟ್ಟುಗಳು ಇತ್ಯಾದಿಗಳನ್ನು ಜಾರಿಗೊಳಿಸಿದ ತರುವಾಯ, ಅಥವಾ ವ್ಯಕ್ತಿಗಳನ್ನು ವಿಮೋಚನೆಗೊಳಿಸಿದ ತರುವಾಯ ಅದನ್ನು ವಾಪಸ್ಸು ಕಳುಹಿಸತಕ್ಕುದು.

ಭಾಗ-**III**

ಪ್ರೆಸಿಡೆನ್ಸಿ ಪಟ್ಟಣಗಳಲ್ಲಿನ ಬಂದಿಗಳು

5. ವಾರೆಂಟುಗಳು ಇತ್ಯಾದಿಗಳನ್ನು ಪೊಲೀಸ್ ಅಧಿಕಾರಿಗಳಿಗೆ ನಿರ್ದೇಶಿಸತಕ್ಕುದು
6. ಪ್ರೆಸಿಡೆನ್ಸಿ ಬಂದೀಖಾನೆಗಳ ಸೂಪರಿಂಟೆಂಡೆಂಟರುಗಳನ್ನು ನೇಮಕ ಮಾಡಲು ರಾಜ್ಯ ಸರ್ಕಾರಗಳಿಗೆ ಅಧಿಕಾರ
7. ಉಚ್ಚ ನ್ಯಾಯಾಲಯದಿಂದ ಕಾರಾವಾಸ ಅಥವಾ ಮರಣ ದಂಡನೆಯ ಶಿಕ್ಷೆಗೆ ಗುರಿಯಾದ ವ್ಯಕ್ತಿಗಳ ವಶಾವಣೆ
8. ಉಚ್ಚ ನ್ಯಾಯಾಲಯದಿಂದ ಗಡೀಪಾರು ಶಿಕ್ಷೆಗೆ ಗುರಿಯಾದ ವ್ಯಕ್ತಿಗಳ ವಶಾವಣೆ
9. ಡಿಕ್ರಿಯ ಅಮಲ್ಜಾರಿಯಲ್ಲಿ ಅಥವಾ ನಿಂದನೆಗಾಗಿ ಉಚ್ಚ ನ್ಯಾಯಾಲಯವು ಒಪ್ಪಿಸಿದ ವ್ಯಕ್ತಿಗಳ ವಶಾವಣೆ
10. ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರುಗಳು ಶಿಕ್ಷೆಗೆ ಗುರಿಪಡಿಸಿದ ವ್ಯಕ್ತಿಗಳ ವಶಾವಣೆ
11. ಉಚ್ಚ ನ್ಯಾಯಾಲಯದಿಂದ ಅಧಿವಿಚಾರಣೆಗಾಗಿ ಒಪ್ಪಿಸಿದ ವ್ಯಕ್ತಿಗಳ ವಶಾವಣೆ
12. ದಿವಾಳಿಗಾಗಿನ ಅರ್ಜಿಯ ಬಗ್ಗೆ ಸಿವಿಲ್ ಪ್ರಕ್ರಿಯಾ ಸಂಹಿತೆಯ 350ನೇ ಪ್ರಕರಣದ ಮೇರೆಗೆ ಉಚ್ಚ ನ್ಯಾಯಾಲಯದಿಂದ ಸುನಾವಣೆಯು ಇತ್ಯರ್ಥದಲ್ಲಿರುವಾಗ ಅಭಿರಕ್ಷೆ
13. ಪ್ರೆಸಿಡೆನ್ಸಿ ಪಟ್ಟಣದಲ್ಲಿ ಉಚ್ಚ ನ್ಯಾಯಾಲಯ ಅಥವಾ ಸಿವಿಲ್ ನ್ಯಾಯಾಲಯದ ವಾರೆಂಟಿನ ಅನುಸರಣೆಯಲ್ಲಿ ದಸ್ತಗಿರಿ ಮಾಡಿದ ವ್ಯಕ್ತಿಗಳ ವಶಾವಣೆ.

ಭಾಗ-**IV**

ಪ್ರೆಸಿಡೆನ್ಸಿ ಪಟ್ಟಣಗಳ ಹೊರಗಡೆ ಇರುವ ಬಂದಿಗಳು

14. ಬಂದೀಖಾನೆ ಇತ್ಯಾದಿಗಳಿಗೆ ಈ ಭಾಗದಲ್ಲಿ ಮಾಡಿದ ಉಲ್ಲೇಖಗಳನ್ನು ಸುಧಾರಣಾ ಶಾಲೆಗಳಿಗೂ ಸಹ ಮಾಡಿದ ಉಲ್ಲೇಖಗಳೆಂದು ಅರ್ಥೈಸತಕ್ಕುದು
15. ಕೆಲವು ನ್ಯಾಯಾಲಯಗಳು ಕೊಟ್ಟ ಶಿಕ್ಷೆಗಳನ್ನು ಜಾರಿಗೊಳಿಸಲು ಬಂದೀಖಾನೆಗಳ ಪ್ರಭಾರದಲ್ಲಿರುವ ಅಧಿಕಾರಿಗಳಿಗೆ ಅಧಿಕಾರ.
16. ಅಂಥ ನ್ಯಾಯಾಲಯದ ಅಧಿಕಾರಿಯ ವಾರಂಟು ಸಾಕಷ್ಟು ಅಧಿಕಾರವಾಗಿರುವುದು.

17. ಈ ಭಾಗದ ಮೇರೆಗೆ ಜಾರಿಗೊಳಿಸುವುದಕ್ಕಾಗಿ ಕಳುಹಿಸಿದ ವಾರೆಂಟಿನ ಕಾನೂನು ಸಮ್ಮತತೆಯ ಬಗ್ಗೆ ಬಂದೀಖಾನೆಯ ಪ್ರಭಾರದಲ್ಲಿರುವ ಅಧಿಕಾರಿಯು ಸಂದೇಹಪಡುವಲ್ಲಿ ಪ್ರಕ್ರಿಯೆ.

18. ಸಾಮಾನ್ಯವಾಗಿ ರಾಜ್ಯಗಳಲ್ಲಿ ಜಾರಿಗೊಳಿಸಲಾಗದೆ ಇರುವ ಕೆಲವು ಮರಣ ದಂಡನೆಗಳನ್ನು ಅಲ್ಲಿ ಜಾರಿಗೊಳಿಸುವುದು.

## ಭಾಗ -**V**

19. ರಿಂದ 27 (ನಿರಸಿತ)

## ಭಾಗ-**VI**

### ಬಂದಿಗಳ ಸ್ಥಳಾಂತರಣ

28. ಈ ಭಾಗದಲ್ಲಿ ಬಂದೀಖಾನೆಗಳು, ಇತ್ಯಾದಿಗಳಿಗೆ ಮಾಡಿದ ಉಲ್ಲೇಖಗಳನ್ನು ಸುಧಾರಣಾ ಶಾಲೆಗಳಿಗೂ ಸಹ ಮಾಡಿದ ಉಲ್ಲೇಖಗಳೆಂದು ಅರ್ಥೈಸತಕ್ಕುದು.

29. ಬಂದಿಗಳ ಸ್ಥಳಾಂತರಣ.

30. ಮನೋವಿಕಲ ಬಂದಿಗಳೊಂದಿಗೆ ಹೇಗೆ ವ್ಯವಹರಿಸತಕ್ಕುದು.

31. ಒಂದು ಸ್ಥಳೀಯ ಸರ್ಕಾರದ ಅಡಿಯಲ್ಲಿರುವ ರಾಜ್ಯ ಕ್ಷೇತ್ರಗಳಿಂದ ಇನ್ನೊಂದರ ಅಡಿಯಲ್ಲಿರುವ ರಾಜ್ಯ ಕ್ಷೇತ್ರಗಳಿಗೆ ಬಂದಿಗಳ ಸ್ಥಳಾಂತರಣ.

## ಭಾಗ-**VII**

### ಗಡೀಪಾರು ಶಿಕ್ಷೆಗೆ ಒಳಗಾಗಿರುವ ವ್ಯಕ್ತಿಗಳು

32. ಗಡೀಪಾರು ಶಿಕ್ಷೆಗೆ ಒಳಗಾಗಿರುವ ವ್ಯಕ್ತಿಗಳನ್ನು ಬಂಧಿಸಿಡುವುದಕ್ಕಾಗಿನ ಸ್ಥಳಗಳನ್ನು ಗೊತ್ತುಪಡಿಸುವುದು ಮತ್ತು ಅಲ್ಲಿಗೆ ಅವರ ಸ್ಥಳಾಂತರಣ.

## ಭಾಗ-**VIII**

### ಬಂದಿಗಳ ವಿಮೋಚನೆ

33. ಕ್ಷಮೆಗಾಗಿ ಶಿಫಾರಸು ಮಾಡಿದ ಬಂದಿಯನ್ನು ಉಚ್ಚ ನ್ಯಾಯಾಲಯದ ಆದೇಶದ ಮೂಲಕ ಪುನರ್ ಮುಚ್ಚಳಿಕೆಯ ಮೇಲೆ ಬಿಡುಗಡೆ ಮಾಡುವುದು.

## ಭಾಗ-**IX**

### ಬಂದಿಗಳ ಹಾಜರಾತಿಯನ್ನು ಮತ್ತು ಅವರ ಸಾಕ್ಷ್ಯವನ್ನು ಪಡೆಯುವುದನ್ನು ಅಗತ್ಯಪಡಿಸುವುದಕ್ಕೆ ಸಂಬಂಧಪಟ್ಟ ಉಪಬಂಧಗಳು

34 – 53. (ನಿರಸಿತ)

ಮೊದಲನೇ ಅನುಸೂಚಿ. (ನಿರಸಿತ)

ಎರಡನೇ ಅನುಸೂಚಿ. (ನಿರಸಿತ)

ಮೂರನೇ ಅನುಸೂಚಿ. (ನಿರಸಿತ)

# ಬಂದಿಗಳ ಅಧಿನಿಯಮ, 1900

**(1900**ರ ಅಧಿನಿಯಮ ಸಂಖ್ಯೆ **3)**

[2ನೇ ಫೆಬ್ರವರಿ 1900]

ನ್ಯಾಯಾಲಯದ ಆದೇಶದ ಮೂಲಕ ಬಂಧಿತರಾದ ಬಂದಿಗಳಿಗೆ ಸಂಬಂಧಪಟ್ಟ ಕಾನೂನನ್ನು ಕ್ರೋಡೀಕರಿಸುವ ಅಧಿನಿಯಮ.

ನ್ಯಾಯಾಲಯದ ಆದೇಶದ ಮೂಲಕ ಬಂಧಿತರಾದ ಬಂದಿಗಳಿಗೆ ಸಂಬಂಧಪಟ್ಟ ಕಾನೂನನ್ನು ಕ್ರೋಡೀಕರಿಸುವುದು ವಿಹಿತವಾಗಿರುವುದರಿಂದ, ಈ ಮೂಲಕ ಈ ಕೆಳಕಂಡಂತೆ ಅಧಿನಿಯಮಿಸಲಾಗಿದೆ:-

## ಭಾಗ-I

## ಪ್ರಾರಂಭಿಕ

**1. ಚಿಕ್ಕ ಹೆಸರು ಮತ್ತು ವ್ಯಾಪ್ತಿ.-** (1) ಈ ಅಧಿನಿಯಮವನ್ನು ಬಂದಿಗಳ ಅಧಿನಿಯಮ, 1900 ಎಂದು ಕರೆಯತಕ್ಕದ್ದು.

(2) ಇದು 1956ರ ನವೆಂಬರ್ ಒಂದನೆಯ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಭಾಗ 'ಬಿ' ರಾಜ್ಯಗಳಲ್ಲಿ ಒಳಗೊಂಡಿದ್ದಂಥ ರಾಜ್ಯಕ್ಷೇತ್ರಗಳನ್ನು ಹೊರತುಪಡಿಸಿ ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ವಿಷಯ ಅಥವಾ ಸಂದರ್ಭಕ್ಕೆ ತದ್ವಿರುದ್ಧವಾಗಿ ಏನಾದರೂ ಇದ್ದ ಹೊರತು,-

(ಎ) "ನ್ಯಾಯಾಲಯ" ಎಂಬುದು ಒಬ್ಬ ಕಾರೋನರ್‌ನನ್ನು ಮತ್ತು ಸಿವಿಲ್, ಕ್ರಿಮಿನಲ್ ಅಥವಾ ರಾಜಸ್ವ ಅಧಿಕಾರ ವ್ಯಾಪ್ತಿಯನ್ನು ಕಾನೂನುಬದ್ಧವಾಗಿ ಚಲಾಯಿಸುವ ಯಾವನೇ ಅಧಿಕಾರಿಯನ್ನು ಒಳಗೊಳ್ಳುತ್ತದೆ;

(ಬಿ) "ಬಂದೀಖಾನೆ" ಎಂಬುದು ರಾಜ್ಯ ಸರ್ಕಾರವು, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಸಹಾಯಕ ಜೈಲು ಎಂದು ಘೋಷಿಸಿರುವಂಥ ಯಾವುದೇ ಸ್ಥಳವನ್ನು ಒಳಗೊಳ್ಳುತ್ತದೆ;

(ಸಿ) "ರಾಜ್ಯಗಳು" ಎಂದರೆ ಈ ಅಧಿನಿಯಮವು ವ್ಯಾಪ್ತವಾಗುವಂಥ ರಾಜ್ಯಕ್ಷೇತ್ರಗಳು.

## ಭಾಗ-II

## ಸಾಮಾನ್ಯ

**3. ತಮ್ಮ ಅಭಿರಕ್ಷೆಗೆ ಕ್ರಮಬದ್ಧವಾಗಿ ಒಪ್ಪಿಸಿದ ವ್ಯಕ್ತಿಗಳನ್ನು ಬಂಧಿಸಿಡಲು ಬಂದೀಖಾನೆಗಳ ಪ್ರಭಾರದಲ್ಲಿರುವ ಅಧಿಕಾರಿಗಳು.-** ಬಂದೀಖಾನೆಯ ಪ್ರಭಾರದಲ್ಲಿರುವ ಅಧಿಕಾರಿಯು, ಯಾವುದೇ ನ್ಯಾಯಾಲಯವು ಈ ಅಧಿನಿಯಮದ ಮೇರೆಗೆ ಅಥವಾ ಅನ್ಯಥಾ ಯಾವುದೇ ರಿಟ್ಟು, ವಾರಂಟು ಅಥವಾ ಆದೇಶದ ಜರೂರು ಅವಶ್ಯಕತೆಗೆ ಅನುಸಾರವಾಗಿ, ತನಗೆ ಕ್ರಮಬದ್ಧವಾಗಿ ಒಪ್ಪಿಸಲಾಗಿರುವ ಎಲ್ಲ ವ್ಯಕ್ತಿಗಳನ್ನು ಸ್ವೀಕರಿಸತಕ್ಕದ್ದು ಅಥವಾ ಅಂಥ ವ್ಯಕ್ತಿಯನ್ನು ಕಾನೂನಿನ ಯುಕ್ತ ಕ್ರಮದಲ್ಲಿ ವಿಮೋಚನೆಗೊಳಿಸುವವರೆಗೆ ಅಥವಾ ಸ್ಥಳಾಂತರಿಸುವವರೆಗೆ ಬಂಧಿಸಿಡತಕ್ಕದ್ದು.

**4. ಬಂದೀಖಾನೆಗಳ ಪ್ರಭಾರದಲ್ಲಿರುವ ಅಧಿಕಾರಿಗಳು ರಿಟ್ಟುಗಳು ಇತ್ಯಾದಿಗಳನ್ನು ಜಾರಿಗೊಳಿಸಿದ ತರುವಾಯ ಅಥವಾ ವ್ಯಕ್ತಿಗಳನ್ನು ವಿಮೋಚನೆಗೊಳಿಸಿದ ತರುವಾಂಯ ಅವನ್ನು ವಾಪಸ್ಸು ಕಳುಹಿಸತಕ್ಕದ್ದು.-** ಬಂದೀಖಾನೆಯ ಪ್ರಭಾರದಲ್ಲಿರುವ ಅಧಿಕಾರಿಯು, ಅಧಿವಿಚಾರಣೆಗಾಗಿ ಒಪ್ಪಿಸುವಿಕೆಯ ವಾರಂಟನ್ನು ಹೊರತುಪಡಿಸಿ ಹಿಂದೆ ಹೇಳಿದ ಪ್ರತಿಯೊಂದು ರಿಟ್ಟು, ಆದೇಶ ಅಥವಾ ವಾರೆಂಟನ್ನು ಜಾರಿಗೊಳಿಸಿದ ತರುವಾಯ ಅಥವಾ ಅದರ ಮೂಲಕ ಒಪ್ಪಿಸಲಾಗಿದ್ದ ವ್ಯಕ್ತಿಯನ್ನು ವಿಮೋಚನೆಗೊಳಿಸಿದ ತರುವಾಯ ತಕ್ಷಣವೇ ಯಾವ ನ್ಯಾಯಾಲಯವು ಅದನ್ನು ಹೊರಡಿಸಿತೋ ಅಥವಾ ಮಾಡಿತೋ, ಆ ನ್ಯಾಯಾಲಯಕ್ಕೆ ಅಂಥ ರಿಟ್ಟು, ಆದೇಶ ಅಥವಾ ವಾರೆಂಟನ್ನು, ಅದನ್ನು ಹೇಗೆ ಜಾರಿಮಾಡಲಾಗಿದೆ ಎಂಬುದನ್ನು ಅಥವಾ ಅದನ್ನು ಜಾರಿಮಾಡುವುದಕ್ಕೆ ಮುಂಚೆ ಅದರ ಮೂಲಕ ಒಪ್ಪಿಸಿದ ವ್ಯಕ್ತಿಯನ್ನು ಏಕೆ ವಿಮೋಚನೆಗೊಳಿಸಲಾಯಿತು ಎಂಬುದನ್ನು ತೋರಿಸಿ ಅದರ ಮೇಲೆ ಹಿಂಬರಹ ಮಾಡಿದ ಮತ್ತು ಅವನು ರುಜುಮಾಡಿದ ಪ್ರಮಾಣ ಪತ್ರದೊಂದಿಗೆ ವಾಪಸ್ಸು ಕಳುಹಿಸತಕ್ಕದ್ದು.

## ಭಾಗ-III

## ಪ್ರೆಸಿಡೆನ್ಸಿ ಪಟ್ಟಣಗಳಲ್ಲಿನ ಬಂದಿಗಳು

**5. ವಾರೆಂಟುಗಳು ಇತ್ಯಾದಿಗಳನ್ನು ಪೊಲೀಸ್ ಅಧಿಕಾರಿಗಳಿಗೆ ನಿರ್ದೇಶಿಸತಕ್ಕದ್ದು:-** ಉಚ್ಚನ್ಯಾಯಾಲಯವು ತನ್ನ ಸಾಮಾನ್ಯ, ವಿಶೇಷ ಅಥವಾ ಇತರ ಕ್ರಿಮಿನಲ್ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಿ ಯಾವನೇ ವ್ಯಕ್ತಿಯ ದಸ್ತಗಿರಿಗಾಗಿ ಹೊರಡಿಸಿದ ಪ್ರತಿಯೊಂದು ರಿಟ್ಟು ಅಥವಾ ವಾರೆಂಟನ್ನು ಅಂಥ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗಿನ ಪೊಲೀಸು ಅಧಿಕಾರಿಗೆ ನಿರ್ದೇಶಿಸತಕ್ಕದ್ದು ಮತ್ತು ಅವನು ಅದನ್ನು ಜಾರಿಗೊಳಿಸತಕ್ಕದ್ದು.

**6. ಪ್ರೆಸಿಡೆನ್ಸಿ ಬಂದೀಖಾನೆಗಳ ಸೂಪರಿಂಟೆಂಡೆಂಟರುಗಳನ್ನು ನೇಮಕಮಾಡಲು ರಾಜ್ಯ ಸರ್ಕಾರಗಳಿಗೆ ಅಧಿಕಾರ.–** ಈ ಭಾಗದ ಮೇರೆಗೆ ತಮ್ಮ ಅಭಿರಕ್ಷೆಗೆ ಒಪ್ಪಿಸಿದ ಬಂದಿಗಳನ್ನು ಸ್ವೀಕರಿಸಲು ಮತ್ತು ಬಂಧಿಸಿಡಲು ಅಧಿಕಾರವನ್ನು ಹೊಂದಿರತಕ್ಕ ಅಧಿಕಾರಿಗಳನ್ನು ರಾಜ್ಯ ಸರ್ಕಾರವು ನೇಮಿಸಬಹುದು.

**ವಿವರಣೆ.–** ಯಾವುದೇ ಪದನಾಮದಿಂದ ಕರೆದಿರಲಿ, ಹಾಗೆ ನೇಮಕಗೊಂಡ ಯಾವನೇ ಅಧಿಕಾರಿಯನ್ನು, ಇಲ್ಲಿ ಇನ್ನು ಮುಂದೆ "ಸೂಪರಿಂಟೆಂಡೆಂಟ್" ನೆಂದು ಉಲ್ಲೇಖಿಸಲಾಗಿದೆ.

**7. ಉಚ್ಚನ್ಯಾಯಾಲಯವು ಕಾರಾವಾಸ ಅಥವಾ ಮರಣದಂಡನೆಯ ಶಿಕ್ಷೆಗೆ ಗುರಿಪಡಿಸಿದ ವ್ಯಕ್ತಿಗಳ ವಶಾವಣೆ.–** ಉಚ್ಚನ್ಯಾಯಾಲಯವು ತನ್ನ ಅಸಲು ಕ್ರಿಮಿನಲ್ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಿ ಯಾವನೇ ವ್ಯಕ್ತಿಯನ್ನು ಕಾರಾವಾಸ ಅಥವಾ ಮರಣದಂಡನೆಯ ಶಿಕ್ಷೆಗೆ ಗುರಿಪಡಿಸಿರುವಲ್ಲಿ ಆ ನ್ಯಾಯಾಲಯವು ತನ್ನ ವಾರೆಂಟ್‌ನೊಂದಿಗೆ ಅವನನ್ನು ಸೂಪರಿಂಟೆಂಡೆಂಟನಿಗೆ ವಶಾವಣೆ ಮಾಡಿಸತಕ್ಕುದು ಮತ್ತು ಆ ವಾರೆಂಟನ್ನು ಸೂಪರಿಂಟೆಂಡೆಂಟನು ಜಾರಿಗೊಳಿಸತಕ್ಕುದು ಮತ್ತು ಅವನು ಅದನ್ನು ಜಾರಿಗೊಳಿಸಿದಾಗ ಉಚ್ಚನ್ಯಾಯಾಲಯಕ್ಕೆ ವಾಪಸ್ಸು ಮಾಡತಕ್ಕುದು.

**8. ಉಚ್ಚನ್ಯಾಯಾಲಯದಿಂದ ಗಡೀಪಾರು ಶಿಕ್ಷೆಗೆ ಗುರಿಯಾದ ವ್ಯಕ್ತಿಗಳ ವಶಾವಣೆ.–** ಯಾವನೇ ವ್ಯಕ್ತಿಯನ್ನು, ಉಚ್ಚನ್ಯಾಯಾಲಯವು, ತನ್ನ ಅಸಲು ಕ್ರಿಮಿನಲ್ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಿ ಗಡಿಪಾರು ಶಿಕ್ಷೆಗೆ ಗುರಿಪಡಿಸಿರುವಲ್ಲಿ, ಆ ನ್ಯಾಯಾಲಯವು ಅವನನ್ನು ಸೂಪರಿಂಟೆಂಡೆಂಟನಿಗೆ ಮಧ್ಯವರ್ತಿ ಅಭಿರಕ್ಷೆಗಾಗಿ ವಶಾವಣೆ ಮಾಡಿಸತಕ್ಕುದು, ಮತ್ತು ಅಂಥ ವ್ಯಕ್ತಿಯ ಆ ಗಡೀಪಾರು ಅಂಥ ವಶಾವಣೆ ಆದಂದಿನಿಂದ ಪ್ರಾರಂಭವಾಗುವುದೆಂದು ಭಾವಿಸತಕ್ಕುದು.

**9. ಡಿಕ್ರಿಯ ಅಮಲ್ಜಾರಿಯಲ್ಲಿ ಅಥವಾ ನಿಂದನೆಗಾಗಿ ಉಚ್ಚನ್ಯಾಯಾಲಯವು ಒಪ್ಪಿಸಿದ ವ್ಯಕ್ತಿಗಳ ವಶಾವಣೆ.–** ಯಾವನೇ ವ್ಯಕ್ತಿಯನ್ನು ಉಚ್ಚನ್ಯಾಯಾಲಯವು ಡಿಕ್ರಿಯ ಅಮಲ್ಜಾರಿಯಲ್ಲಾಗಲಿ ಅಥವಾ ನ್ಯಾಯಾಲಯದ ನಿಂದನೆಗಾಗಿಯಾಗಲಿ ಅಥವಾ ಯಾವುದೇ ಇತರ ಕಾರಣಕ್ಕಾಗಿಯಾಗಲಿ ಒಪ್ಪಿಸಿರುವಲ್ಲಿ ಆ ನ್ಯಾಯಾಲಯವು, ಒಪ್ಪಿಸುವಿಕೆಯ ವಾರೆಂಟಿನೊಂದಿಗೆ ಅವನನ್ನು ಸೂಪರಿಂಟೆಂಡೆಂಟನಿಗೆ ವಶಾವಣೆ ಮಾಡಿಸತಕ್ಕುದು.

**10. ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರುಗಳು ಶಿಕ್ಷೆಗೆ ಗುರಿಪಡಿಸಿದ ವ್ಯಕ್ತಿಗಳ ವಶಾವಣೆ.–** ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟನು ಯಾವನೇ ವ್ಯಕ್ತಿಯನ್ನು ಕಾರಾವಾಸ ಶಿಕ್ಷೆಗೆ ಗುರಿಪಡಿಸಿರುವಲ್ಲಿ ಅಥವಾ ಶಾಂತಿಪಾಲನೆ ಮಾಡಲು ಅಥವಾ ಒಳ್ಳೆಯ ನಡವಳಿಕೆಯಲ್ಲಿರಲು ಭದ್ರತೆಯನ್ನು ಕೊಡಲು ತಪ್ಪಿರುವುದಕ್ಕಾಗಿ ಅವನನ್ನು ಬಂದೀಖಾನೆಗೆ ಒಪ್ಪಿಸಿರುವಲ್ಲಿ ಆ ಮ್ಯಾಜಿಸ್ಟ್ರೇಟನು ತನ್ನ ವಾರೆಂಟ್‌ನೊಂದಿಗೆ ಅವನನ್ನು ಸೂಪರಿಂಟೆಂಡೆಂಟನಿಗೆ ವಶಾವಣೆ ಮಾಡಿಸತಕ್ಕುದು.

**11. ಉಚ್ಚನ್ಯಾಯಾಲಯದಿಂದ ಅಧಿವಿಚಾರಣೆಗಾಗಿ ಒಪ್ಪಿಸಿದ ವ್ಯಕ್ತಿಗಳ ವಶಾವಣೆ.–** ಉಚ್ಚನ್ಯಾಯಾಲಯವು ತನ್ನ ಅಸಲು ಕ್ರಿಮಿನಲ್ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಿ ಅಧಿವಿಚಾರಣೆ ಮಾಡುವುದಕ್ಕಾಗಿ, ಮ್ಯಾಜಿಸ್ಟ್ರೇಟನು ಅಥವಾ ಜಸ್ಟೀಸ್ ಆಫ್ ದಿ ಪೀಸ್ ಇವನು ಒಪ್ಪಿಸಿದ ಪ್ರತಿಯೊಬ್ಬ ವ್ಯಕ್ತಿಯನ್ನು ಅಧಿವಿಚಾರಣೆಗಾಗಿ ಆ ನ್ಯಾಯಾಲಯದ ಮುಂದೆ ಅಂಥ ವ್ಯಕ್ತಿಯನ್ನು ಹಾಜರುಪಡಿಸಲು ಸೂಪರಿಂಟೆಂಡೆಂಟನಿಗೆ ನಿರ್ದೇಶಿಸಿ, ಒಪ್ಪಿಸುವಿಕೆಯ ವಾರಂಟಿನೊಂದಿಗೆ ಸೂಪರಿಂಟೆಂಡೆಂಟನಿಗೆ ವಶಾವಣೆ ಮಾಡತಕ್ಕುದು; ಮತ್ತು ಆ ಸೂಪರಿಂಟೆಂಡೆಂಟನು ಸಾಧ್ಯವಾದಷ್ಟು ಬೇಗನೆ ಒಪ್ಪಿಸುವಿಕೆಯ ವಾರೆಂಟಿನೊಂದಿಗೆ ಅಂಥ ವ್ಯಕ್ತಿಯ ವಿಚಾರದಲ್ಲಿ ಕಾನೂನಿಗೆ ಅನುಸಾರವಾಗಿ ವ್ಯವಹರಿಸಲು ಅವನನ್ನು ಆ ನ್ಯಾಯಾಲಯದ ಮುಂದೆ ಅದರ ಕ್ರಿಮಿನಲ್ ಸೆಷನ್ಸಿಗೆ ತೆಗೆದುಕೊಂಡು ಹೋಗುವಂತೆ ಮಾಡತಕ್ಕುದು.

**12. ದಿವಾಳಿಗಾಗಿನ ಅರ್ಜಿಯ ಬಗ್ಗೆ ಸಿವಿಲ್ ಪ್ರಕ್ರಿಯಾ ಸಂಹಿತೆಯ 350ನೇ ಪ್ರಕರಣದ ಮೇರೆಗೆ ಉಚ್ಚ ನ್ಯಾಯಾಲಯದಿಂದ ಸುನಾವಣೆಯು ಇತ್ಯರ್ಥದಲ್ಲಿರುವಾಗ ಅಭಿರಕ್ಷೆ.–** ದಿವಾಳಿಯ ಬಗ್ಗೆ ಘೋಷಣೆಗಾಗಿನ ಯಾವುದೇ ಅರ್ಜಿಗೆ ಸಂಬಂಧಿಸಿ ಸಿವಿಲ್ ಪ್ರಕ್ರಿಯಾ ಸಂಹಿತೆಯ 350ನೇ ಪ್ರಕರಣದ ಮೇರೆಗಿನ ಸುನಾವಣೆಯು ಇತ್ಯರ್ಥದಲ್ಲಿರುವಾಗ ಉಚ್ಚ ನ್ಯಾಯಾಲಯವು, ಸದರಿ ಸಂಹಿತೆಯ 349ನೇ ಪ್ರಕರಣದ ಮೇರೆಗೆ ಭದ್ರತೆಯ ಮೇಲೆ ಬಿಡುಗಡೆ ಮಾಡುವ ಬಗೆಗಿನ ಉಪಬಂಧಗಳಿಗೊಳಪಟ್ಟು ಸಂಬಂಧಪಟ್ಟ ತೀರ್ಪು ಋಣಿಯನ್ನು ಸೂಪರಿಂಟೆಂಡೆಂಟನಿಗೆ ವಶಾವಣೆ ಮಾಡಿಸತಕ್ಕುದು. ಮತ್ತು ಆ ಸೂಪರಿಂಟೆಂಡೆಂಟನು ಸದರಿ ತೀರ್ಪು ಋಣಿಯನ್ನು ಸುರಕ್ಷಿತ ಅಭಿರಕ್ಷೆಯಲ್ಲಿ ಉಚ್ಚ ನ್ಯಾಯಾಲಯದ ಆದೇಶಾನುಸಾರ ಅದರ ಮುಂದೆ ಕೊಂಡೊಯ್ಯುವ ಉದ್ದೇಶಕ್ಕಾಗಿ ಆ ನ್ಯಾಯಲಯದ ಅಧಿಕಾರಿಗೆ ಅವನನ್ನು ಮರು ವಶಾವಣೆ ಮಾಡುವವರೆಗೆ ಅಥವಾ ಕಾನೂನಿನ ಯುಕ್ತ ಕ್ರಮದಲ್ಲಿ ಅವನನ್ನು ವಿಮೋಚನೆಗೊಳಿಸುವವರೆಗೆ ಬಂಧಿಸಿಡತಕ್ಕುದು.

**13. ಪ್ರೆಸಿಡೆನ್ಸಿ ಪಟ್ಟಣದಲ್ಲಿ ಉಚ್ಚನ್ಯಾಯಾಲಯದ ಅಥವಾ ಸಿವಿಲ್ ನ್ಯಾಯಾಲಯದ ವಾರೆಂಟಿನ ಅನುಸಾರ ದಸ್ತಗಿರಿ ಮಾಡಿದ ವ್ಯಕ್ತಿಗಳ ವಶಾವಣೆ.–** (1) ಉಚ್ಚನ್ಯಾಯಾಲಯವು ತನ್ನ ಸಿವಿಲ್ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಿ ಹೊರಡಿಸಿದ ರಿಟ್ಟು, ವಾರೆಂಟು ಅಥವಾ ಆದೇಶದ ಅನುಸರಣೆಯಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನು ಅಥವಾ ಅಧಿನಿಯಮಿತಿಯ ಮೇರೆಗೆ ಪ್ರೆಸಿಡೆನ್ಸಿ ಪಟ್ಟಣದಲ್ಲಿ ಸ್ಥಾಪಿಸಿದ ಯಾವುದೇ ಸಿವಿಲ್ ನ್ಯಾಯಾಲಯವು ಹೊರಡಿಸಿದ ವಾರೆಂಟಿನ ಅನುಸರಣೆಯಲ್ಲಿ ಅಥವಾ 5ನೇ ಪ್ರಕರಣದ ಮೇರೆಗೆ ಹೊರಡಿಸಿದ ವಾರೆಂಟಿನ ಅನುಸರಣೆಯಲ್ಲಿ ದಸ್ತಗಿರಿಯಾದ ಪ್ರತಿಯೊಬ್ಬ ವ್ಯಕ್ತಿಯನ್ನು ವಿಳಂಬವಿಲ್ಲದೆ, ಯಾವ ನ್ಯಾಯಾಲಯ ಅಥವಾ ನ್ಯಾಯಾಧೀಶನು, ಆ ರಿಟ್ಟು, ವಾರಂಟು ಅಥವಾ ಆದೇಶವನ್ನು ಹೊರಡಿಸಿತೋ / ಹೊರಡಿಸಿದನೋ / ಕೊಟ್ಟಿತೋ / ಕೊಟ್ಟನೋ ಅಥವಾ ಮಾಡಿತೋ / ಮಾಡಿದನೋ ಆ ನ್ಯಾಯಾಲಯ ಅಥವಾ ನ್ಯಾಯಾಧೀಶನ ಮುಂದೆ ಸದರಿ ನ್ಯಾಯಾಲಯವು ಅಥವಾ ಅದರ ನ್ಯಾಯಾಧೀಶನು ಆಗ ಅಸಲು ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವುದಕ್ಕಾಗಿ ಉಪವೇಶನದಲ್ಲಿದ್ದರೆ, ತರತಕ್ಕುದು.

(2) ಸದರಿ ನ್ಯಾಯಾಲಯವು, ಅಥವಾ ಅದರ ನ್ಯಾಯಾಧೀಶನು, ತನ್ನ ಅಸಲು ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವುದಕ್ಕಾಗಿ ಆಗ ಉಪವೇಶನದಲ್ಲಿರದಿದ್ದರೆ, ಹಿಂದೆ ಹೇಳಿದಂತೆ ದಸ್ತಗಿರಿ ಮಾಡಿರುವಂಥ ವ್ಯಕ್ತಿಯನ್ನು, ಸದರಿ ನ್ಯಾಯಾಲಯದ ನ್ಯಾಯಾಧೀಶನು ಅನ್ಯಥಾ ನಿರ್ದೇಶಿಸಿದ ಹೊರತು, ಮಧ್ಯವರ್ತಿ ಅಭಿರಕ್ಷೆಗಾಗಿ ಸೂಪರಿಂಟೆಂಡೆಂಟನಿಗೆ ವಶಾವಣೆ ಮಾಡತಕ್ಕುದು, ಮತ್ತು ಕಾನೂನಿಗೆ ಅನುಸಾರವಾಗಿ ಅಂಥ ವ್ಯಕ್ತಿಯ ಬಗ್ಗೆ ವ್ಯವಹರಿಸಲು ಅಸಲು ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವುದಕ್ಕಾಗಿ ಸದರಿ ನ್ಯಾಯಾಲಯ ಅಥವಾ ಅದರ ನ್ಯಾಯಾಧೀಶನ ಮುಂದೆ, ಆ ನ್ಯಾಯಾಲಯ ಅಥವಾ ನ್ಯಾಯಾಧೀಶನ ಮುಂದಿನ ಉಪವೇಶನದಲ್ಲಿ ತರತಕ್ಕುದು; ಮತ್ತು ಸದರಿ

ನ್ಯಾಯಾಲಯವು ಅಥವಾ ನ್ಯಾಯಾಧೀಶನು ಆ ಉದ್ದೇಶಕ್ಕಾಗಿ ಎಲ್ಲಾ ಅವಶ್ಯಕ ಆದೇಶಗಳು ಅಥವಾ ವಾರೆಂಟುಗಳನ್ನು ಮಾಡಲು ಅಥವಾ ಕೊಡಲು ಅಧಿಕಾರವನ್ನು ಹೊಂದಿರತಕ್ಕುದು.

## ಭಾಗ–IV

## ಪ್ರೆಸಿಡೆನ್ಸಿ ಪಟ್ಟಣಗಳ ಹೊರಗಡೆ ಇರುವ ಬಂದಿಗಳು

**14. ಬಂದೀಖಾನೆ ಇತ್ಯಾದಿಗಳಿಗೆ ಈ ಭಾಗದಲ್ಲಿ ಮಾಡಿದ ಉಲ್ಲೇಖಗಳನ್ನು ಸುಧಾರಣಾ ಶಾಲೆಗಳಿಗೂ ಸಹ ಮಾಡಿದ ಉಲ್ಲೇಖಗಳೆಂದು ಅರ್ಥೈಸತಕ್ಕುದು.**– ಈ ಭಾಗದಲ್ಲಿ ಬಂದೀಖಾನೆಗಳಿಗೆ ಮಾಡಿರುವ ಅಥವಾ ಕಾರಾವಾಸ ಅಥವಾ ಬಂಧನದಲ್ಲಿಡುವುದಕ್ಕೆ ಮಾಡಿದ ಎಲ್ಲಾ ಉಲ್ಲೇಖಗಳನ್ನು, ಸುಧಾರಣಾ ಶಾಲೆಗಳಿಗೆ ಮಾಡಿದ ಅಥವಾ ಅದರಲ್ಲಿ ಬಂಧಿಸಿಡುವುದಕ್ಕೂ ಸಹ ಮಾಡಿದ ಉಲ್ಲೇಖಗಳೆಂದು ಅರ್ಥೈಸತಕ್ಕುದು.

**15. ಕೆಲವು ನ್ಯಾಯಾಲಯಗಳು ಕೊಟ್ಟ ಶಿಕ್ಷೆಗಳನ್ನು ಜಾರಿಗೊಳಿಸಲು ಬಂದೀಖಾನೆಗಳ ಪ್ರಭಾರದಲ್ಲಿರುವ ಅಧಿಕಾರಿಗಳಿಗೆ ಅಧಿಕಾರ.**– (1) ಪ್ರೆಸಿಡೆನ್ಸಿ ಪಟ್ಟಣಗಳ ಹೊರಗಡೆ ಇರುವ ಬಂದೀಖಾನೆಗಳ ಪ್ರಭಾರದಲ್ಲಿರುವ ಅಧಿಕಾರಿಗಳು ಯಾವನೇ ವ್ಯಕ್ತಿಯನ್ನು ಬಂಧನದಲ್ಲಿಡುವುದಕ್ಕಾಗಿ,–

(ಎ) ಕೇಂದ್ರ ಸರ್ಕಾರದ ಅಥವಾ ಯಾವುದೇ ರಾಜ್ಯ ಸರ್ಕಾರದ ಅಥವಾ ಬರ್ಮಾ ಸರ್ಕಾರದ ಸಾಮಾನ್ಯ ಅಥವಾ ವಿಶೇಷ ಅಧಿಕಾರದ ಮೇರೆಗೆ ರಾಜ್ಯಗಳ ಒಳಗೇ ಆಗಲಿ ಅಥವಾ ಹೊರಗಡೆಯೇ ಆಗಲಿ ಕಾರ್ಯನಿರ್ವಹಿಸುತ್ತಿರುವ ಯಾವುದೇ ನ್ಯಾಯಾಲಯ ಅಥವಾ ನ್ಯಾಯಾಧಿಕರಣವು, ಅಥವಾ ಸಂವಿಧಾನದ ಪ್ರಾರಂಭಕ್ಕೆ ಮುಂಚೆ ಬ್ರಿಟಿಷ್ ಸಾರ್ವಭೌಮನ ಪ್ರತಿನಿಧಿಯ ಸಾಮಾನ್ಯ ಅಥವಾ ವಿಶೇಷ ಅಧಿಕಾರದ ಮೇರೆಗೆ ಕಾರ್ಯನಿರ್ವಹಿಸುತ್ತಿದ್ದ ಯಾವುದೇ ನ್ಯಾಯಾಲಯ ಅಥವಾ ನ್ಯಾಯಾಧಿಕರಣವು; ಅಥವಾ

(ಬಿ) 1950ರ ಜನವರಿ 26ಕ್ಕೆ ಮುಂಚೆ,–

(i) ಪೀಠಾಸೀನ ನ್ಯಾಯಾಧೀಶನು, ಅಥವಾ ಆ ನ್ಯಾಯಾಲಯ ಅಥವಾ ನ್ಯಾಯಾಧಿಕರಣವು ಎರಡು ಅಥವಾ ಅದಕ್ಕಿಂತ ಹೆಚ್ಚು ನ್ಯಾಯಾಧೀಶರನ್ನು ಒಳಗೊಂಡಿದ್ದರೆ ಅವರ ಪೈಕಿ ಕನಿಷ್ಠ ಪಕ್ಷ ಒಬ್ಬ ನ್ಯಾಯಾಧೀಶನು ಆ ರಾಜ್ಯ ಅಥವಾ ಅದರ ರಾಜ ಅಥವಾ ಕೇಂದ್ರ ಸರ್ಕಾರ ಅಥವಾ ಬ್ರಿಟಿಷ್ ಸಾರ್ವಭೌಮನ ಪ್ರತಿನಿಧಿಯು ಅಂಥ ನ್ಯಾಯಾಧೀಶನೆಂದು ಉಪವೇಶನ ನಡೆಸಲು ಅಧಿಕೃತಗೊಳಿಸಿದ ಬ್ರಿಟಿಷ್ ಸಾರ್ವಭೌಮನ ಅಧಿಕಾರಿಯಾಗಿದ್ದರೆ; ಮತ್ತು

(ii) ಯಾವುದೇ ಅಂಥ ನ್ಯಾಯಾಲಯ, ಅಥವಾ ನ್ಯಾಯಾಧಿಕರಣವು ಶಿಕ್ಷೆಗೆ ಗುರಿಪಡಿಸಿದ ವ್ಯಕ್ತಿಗಳನ್ನು ಭಾರತದ ಯಾವುದೇ ಪ್ರಾಂತ್ಯದಲ್ಲಿ ಸ್ವೀಕರಿಸುವುದು, ಬಂಧಿಸುವುದು ಅಥವಾ ಅವನ ಕಾರಾವಾಸವನ್ನು ಆ ರಾಜ್ಯ ಸರ್ಕಾರವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಅಧಿಕೃತಗೊಳಿಸಿದ್ದರೆ;

–ಯಾವುದೇ ದೇಶೀಯ ರಾಜ್ಯದಲ್ಲಿನ ಯಾವುದೇ ನ್ಯಾಯಾಲಯ ಅಥವಾ ನ್ಯಾಯಾಧಿಕರಣವು ಮಾಡಿದ ಅಥವಾ ಹೊರಡಿಸಿದ ಯಾವುದೇ ಶಿಕ್ಷೆ ಅಥವಾ ಆದೇಶವನ್ನು ಜಾರಿಗೊಳಿಸಬಹುದು:

ಪರಂತು, ಸಂಬಂಧಪಟ್ಟ ರಾಜ್ಯಸರ್ಕಾರದ ಪೂರ್ವಮಂಜೂರಾತಿ ಇಲ್ಲದೆ ಬರ್ಮಾದಲ್ಲಿನ ಯಾವುದೇ ನ್ಯಾಯಾಲಯ ಅಥವಾ ನ್ಯಾಯಾಧಿಕರಣವು ಬಂಧನಕ್ಕಾಗಿ ಮಾಡಿದ ಅಥವಾ ಹೊರಡಿಸಿದ ಯಾವುದೇ ಶಿಕ್ಷೆ ಅಥವಾ ಆದೇಶ ಅಥವಾ ವಾರೆಂಟನ್ನು ಜಾರಿಗೊಳಿಸತಕ್ಕುದಲ್ಲ.

(2) ಹಿಂದೆ ಹೇಳಿದಂಥ ದೇಶೀಯ ರಾಜ್ಯದ ನ್ಯಾಯಾಲಯ ಅಥವಾ ನ್ಯಾಯಾಧಿಕರಣವು ಬ್ರಿಟಿಷ್ ಸಾರ್ವಭೌಮನ ಅಧಿಕಾರಿಯ ಸಹಮತಿಯಿಲ್ಲದೆ ಜಾರಿಗೊಳಿಸಲಾಗದಿರುವಂಥ ಶಿಕ್ಷೆಯ ಆದೇಶವನ್ನು ಮಾಡಿದ್ದಲ್ಲಿ ಮತ್ತು ಅಂಥ ಶಿಕ್ಷೆಯ ಆದೇಶವನ್ನು ಗುಣಾವಗುಣಗಳ ಮೇಲೆ ಪರ್ಯಾಲೋಚಿಸಲಾಗಿದ್ದಲ್ಲಿ ಮತ್ತು ಆ ಬಗ್ಗೆ ವಿಶೇಷವಾಗಿ ಅಧಿಕೃತಗೊಳಿಸಿದ ಯಾವನೇ ಅಧಿಕಾರಿಯು ಸ್ಥಿರೀಕರಿಸಿರುವಲ್ಲಿ, ಅಂಥ ಶಿಕ್ಷೆಯ ಆದೇಶವನ್ನು ಅಥವಾ ಅದರ ಅನುಸರಣೆಯಲ್ಲಿ ಹೊರಡಿಸಿದ ಯಾವುದೇ ಆದೇಶ ಅಥವಾ ವಾರೆಂಟನ್ನು ಕೇಂದ್ರ ಸರ್ಕಾರ ಅಥವಾ ಬ್ರಿಟಿಷ್ ಸಾರ್ವಭೌಮನ ಪ್ರತಿನಿಧಿಯ ಅಧಿಕಾರದ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ನ್ಯಾಯಾಲಯ ಅಥವಾ ನ್ಯಾಯಾಧಿಕರಣದ ಶಿಕ್ಷೆಯ ಆದೇಶ, ಅಥವಾ ವಾರೆಂಟು ಎಂಬುದಾಗಿ ಭಾವಿಸತಕ್ಕುದು.

**16. ಅಂಥ ನ್ಯಾಯಾಲಯದ ಅಧಿಕಾರಿಯ ವಾರಂಟು ಸಾಕಷ್ಟು ಅಧಿಕಾರವಾಗಿರುವುದು.**– 15ನೇ ಪ್ರಕರಣದಲ್ಲಿ ಉಲ್ಲೇಖಿಸಲಾದಂಥ ನ್ಯಾಯಾಲಯ ಅಥವಾ ನ್ಯಾಯಾಧಿಕರಣದ ಅಧಿಕಾರಿಯ ಅಧಿಕೃತ ರುಜುವಿನೊಂದಿಗೆ ಹೊರಡಿಸಿದ ವಾರಂಟು ಯಾವನೇ ವ್ಯಕ್ತಿಯ ಬಗ್ಗೆ ಮಾಡಿದ ಶಿಕ್ಷೆಯ ಆದೇಶದ ಅನುಸರಣೆಯಲ್ಲಿ ಅವನನ್ನು ಬಂಧನದಲ್ಲಿಟ್ಟುಕೊಳ್ಳುವುದಕ್ಕಾಗಿ ಅಥವಾ ಯಾವನೇ ವ್ಯಕ್ತಿಯನ್ನು ಗಡೀಪಾರಿಗಾಗಿ ಕಳುಹಿಸುವುದಕ್ಕಾಗಿ ಸಾಕಷ್ಟು ಅಧಿಕಾರವಾಗಿರತಕ್ಕುದು.

**17. ಈ ಭಾಗದ ಮೇರೆಗೆ ಜಾರಿಗೊಳಿಸುವುದಕ್ಕಾಗಿ ಕಳುಹಿಸಿದ ವಾರೆಂಟಿನ ಕಾನೂನು ಸಮ್ಮತತೆಯ ಬಗ್ಗೆ ಬಂದೀಖಾನೆಯ ಪ್ರಭಾರದಲ್ಲಿರುವ ಅಧಿಕಾರಿಯು ಸಂದೇಹಪಡುವಲ್ಲಿ ಪ್ರಕ್ರಿಯೆ.**– (1) ಈ ಭಾಗದ ಮೇರೆಗೆ ಜಾರಿಗೊಳಿಸುವುದಕ್ಕಾಗಿ ಬಂದೀಖಾನೆಯ ಪ್ರಭಾರದಲ್ಲಿರುವ ಅಧಿಕಾರಿಗೆ ಕಳುಹಿಸಿರುವ ವಾರೆಂಟಿನ ಅಥವಾ ಆದೇಶದ ಕಾನೂನು ಸಮ್ಮತತೆಯ ಬಗ್ಗೆ ಅಥವಾ ಯಾರ ಅಧಿಕೃತ ಮೊಹರು ಅಥವಾ ರುಜುವನ್ನು ಅದಕ್ಕೆ ಹಾಕಲಾಗಿದೆಯೋ ಆ ವ್ಯಕ್ತಿಯು ಆ ಶಿಕ್ಷೆಯ ಆದೇಶವನ್ನು ಮಾಡಲು ಮತ್ತು ಆ ವಾರಂಟು ಅಥವಾ ಆದೇಶವನ್ನು ಹೊರಡಿಸಲು ಅವನ ಸಕ್ಷಮತೆಯ ಬಗ್ಗೆ ಬಂದೀಖಾನೆಯ ಪ್ರಭಾರದಲ್ಲಿರುವ ಅಧಿಕಾರಿಗೆ ಸಂದೇಹ ಉಂಟಾದರೆ, ಅವನು ಆ ಬಂದಿಯ ಭಾವೀ ವಿಲೆಯ ಕುರಿತು ಆ ಪ್ರಕರಣದ ಬಗ್ಗೆ ಯಾವ ಸರ್ಕಾರಿ ಆದೇಶದ ಮೂಲಕ ಅವನು ಮತ್ತು ಎಲ್ಲಾ ಇತರ ಸರ್ಕಾರಿ ಅಧಿಕಾರಿಗಳು ಮಾರ್ಗದರ್ಶನ ಪಡೆಯುವರೋ ಆ ರಾಜ್ಯ ಸರ್ಕಾರಕ್ಕೆ ಆ ವಿಷಯವನ್ನು ಅಭಿಪ್ರಾಯ ಕೋರಿಕೆಗಾಗಿ ಒಪ್ಪಿಸತಕ್ಕುದು.

(2) (1)ನೇ ಉಪ-ಪ್ರಕರಣದ ಮೇರೆಗೆ ಮಾಡಿದ ಅಭಿಪ್ರಾಯ ಕೋರಿಕೆ ಇತ್ಯರ್ಥದಲ್ಲಿರುವಾಗ ಆ ಬಂದಿಯನ್ನು ವಾರಂಟು ಅಥವಾ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಪರಿಬಂಧಗಳು ಅಥವಾ ಕಡಿಮೆ ಮಾಡುವಿಕೆಗಳೊಂದಿಗೆ ಬಂಧಿಸಿಡತಕ್ಕುದು.

**18. ಸಾಮಾನ್ಯವಾಗಿ ರಾಜ್ಯಗಳಲ್ಲಿ ಜಾರಿಗೊಳಿಸಲಾಗದ ಕೆಲವು ಮರಣದಂಡನೆಗಳನ್ನು ಅಲ್ಲಿ ಜಾರಿಗೊಳಿಸುವುದು.-** (1) ರಾಜ್ಯಗಳ ಪರಿಮಿತಿಗಳ ಆಚೆ ಇರುವ ರಾಜ್ಯಕ್ಷೇತ್ರದಲ್ಲಿ ಅಥವಾ ಅದಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಅಧಿಕಾರದ ಮೂಲಕ ಸ್ಥಾಪಿತವಾದ ನ್ಯಾಯಾಲಯವು ಅಂಥ ರಾಜ್ಯಕ್ಷೇತ್ರದಲ್ಲಿ ಕೇಂದ್ರ ಸರ್ಕಾರವು ಹೊಂದಿರುವಂಥ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಿ,-

(ಎ) ಯಾವನೇ ವ್ಯಕ್ತಿಗೆ ಮರಣದಂಡನೆಯ ಶಿಕ್ಷೆಯನ್ನು ವಿಧಿಸಿರುವಲ್ಲಿ, ಮತ್ತು

(ಬಿ) ಅಂಥ ರಾಜ್ಯಕ್ಷೇತ್ರದಲ್ಲಿ ಅಂಥ ವ್ಯಕ್ತಿಯನ್ನು ಬಂಧನದಲ್ಲಿಡಲು ಯಾವುದೇ ಸುರಕ್ಷಿತ ಸ್ಥಳವಿಲ್ಲವೆಂಬ ಅಥವಾ ಯೋಗ್ಯ ಮತ್ತು ನೋವಾಗದ ರೀತಿಯಲ್ಲಿ ಅವನನ್ನು ಗಲ್ಲಿಗೇರಿಸಲು ಯಾವುದೇ ಸೂಕ್ತ ಉಪಕರಣಗಳು ಅಲ್ಲಿ ಇಲ್ಲವೆಂಬ ಕಾರಣದಿಂದಾಗಿ, ಅಂಥ ಶಿಕ್ಷೆಯನ್ನು ಆ ರಾಜ್ಯಗಳಲ್ಲಿ ಜಾರಿಗೊಳಿಸಬೇಕೆಂಬ ಅಭಿಪ್ರಾಯವನ್ನು ಹೊಂದಿದ್ದು ಅಂಥ ಶಿಕ್ಷೆಯ ಆದೇಶವನ್ನು ಜಾರಿಗೊಳಿಸುವುದಕ್ಕಾಗಿ ಅದರ ವಾರಂಟನ್ನು ಆ ರಾಜ್ಯಗಳಲ್ಲಿನ ಬಂದೀಖಾನೆಗಳ ಪ್ರಭಾರದಲ್ಲಿರುವ ಅಧಿಕಾರಿಗೆ ಕೊಟ್ಟಿರುವಲ್ಲಿ,

- ಅಂಥ ಅಧಿಕಾರಿಯು ಆ ವಾರೆಂಟನ್ನು ಸ್ವೀಕರಿಸಿದ ಮೇಲೆ ದಂಡ ಪ್ರಕ್ರಿಯಾ ಸಂಹಿತೆ, 1898 (1898ರ 5)ರ 381ನೇ ಪ್ರಕರಣದ ಉಪಬಂಧಗಳ ಮೇರೆಗೆ ಅದು ಕ್ರಮಬದ್ಧವಾಗಿ ಹೊರಡಿಸಿದ ವಾರಂಟು ಆಗಿದ್ದಿದ್ದರೆ ಹೇಗೋ ಹಾಗೆ ಎಲ್ಲಾ ಸಂದರ್ಭಗಳಲ್ಲಿ ಅದರಲ್ಲಿ ನಿಯಮಿಸಬಹುದಾದಂಥ ಸ್ಥಳದಲ್ಲಿ, ಅದೇ ರೀತಿಯಲ್ಲಿ ಮತ್ತು ಅವೇ ಷರತ್ತುಗಳಿಗೊಳಪಟ್ಟು ಗಲ್ಲಿಗೇರಿಸುವುದನ್ನು ಕಾರ್ಯಗತಗೊಳಿಸತಕ್ಕುದು.

(2) ಹಿಂದೆ ಹೇಳಿದ ಯಾವುದೇ ಅಂಥ ವಾರಂಟುಗಳ ಮೇರೆಗೆ ಶಿಕ್ಷೆಗಳ ಆದೇಶಗಳನ್ನು ಜಾರಿಗೊಳಿಸಬೇಕಾದ ಬಂದೀಖಾನೆಗಳ ಪ್ರಭಾರದಲ್ಲಿರುವ ಅಧಿಕಾರಿಗಳು ಪ್ರತಿಯೊಂದು ರಾಜ್ಯದಲ್ಲಿ ಆ ರಾಜ್ಯ ಸರ್ಕಾರವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿರ್ದೇಶಿಸಬಹುದಾದಂಥವರು ಆಗಿರತಕ್ಕುದು.

## ಭಾಗ-V

### ಕಠಿಣ ಸಜೆಯ ಶಿಕ್ಷೆಯನ್ನು ಅನುಭವಿಸುತ್ತಿರುವ ವ್ಯಕ್ತಿಗಳು

[19-27ನೇ ಪ್ರಕರಣಗಳನ್ನು 6-4-49ರಿಂದ ಜಾರಿಗೆ ಬರುವಂತೆ ಕ್ರಿಮಿನಲ್ ಕಾನೂನು (ಜನಾಂಗೀಯ ಬೇಧಭಾವಗಳ ನಿವಾರಣೆ) ಅಧಿನಿಯಮ, 1949 (1949ರ ಸಂಖ್ಯೆ 17)ರ 4ನೇ ಪ್ರಕರಣದ ಮೂಲಕ ನಿರಸನಗೊಳಿಸಲಾಗಿದೆ]

## ಭಾಗ-VI

### ಬಂದಿಗಳ ಸ್ಥಳಾಂತರಣ

**28. ಈ ಭಾಗದಲ್ಲಿ ಬಂದೀಖಾನೆಗಳು ಇತ್ಯಾದಿಗಳಿಗೆ ಮಾಡಿದ ಉಲ್ಲೇಖಗಳನ್ನು ಸುಧಾರಣಾ ಶಾಲೆಗಳಿಗೂ ಸಹ ಮಾಡಿದ ಉಲ್ಲೇಖಗಳೆಂದು ಅರ್ಥೈಸತಕ್ಕುದು.-** ಈ ಭಾಗದಲ್ಲಿ ಬಂದೀಖಾನೆಗಳಿಗೆ ಅಥವಾ ಕಾರಾವಾಸ ಅಥವಾ ಬಂಧನದಲ್ಲಿಡುವುದಕ್ಕೆ ಮಾಡಿರುವ ಎಲ್ಲ ಉಲ್ಲೇಖಗಳನ್ನು ಸುಧಾರಣಾ ಶಾಲೆಗಳು ಅಥವಾ ಅದರಲ್ಲಿ ಬಂಧಿಸಿಡುವುದಕ್ಕೂ ಸಹ ಮಾಡಿದ ಉಲ್ಲೇಖಗಳೆಂದು ಅರ್ಥೈಸತಕ್ಕುದು.

**29. ಬಂದಿಗಳ ಸ್ಥಳಾಂತರಣ.-** (1) ರಾಜ್ಯಸರ್ಕಾರವು,-

(ಎ) ಮರಣ ದಂಡನೆಯ ಶಿಕ್ಷೆಗೆ ಒಳಗಾಗಿರುವ, ಅಥವಾ

(ಬಿ) ಕಾರಾವಾಸ ಅಥವಾ ಗಡೀಪಾರು ಶಿಕ್ಷೆ ಅಥವಾ ಅದಕ್ಕೆ ಬದಲಾದ ಶಿಕ್ಷೆಗೆ ಒಳಗಾಗಿರುವ, ಅಥವಾ

(ಸಿ) ಜುಲ್ಮಾನೆಯನ್ನು ಸಂದಾಯ ಮಾಡಲು ತಪ್ಪಿದ್ದಕ್ಕಾಗಿ, ಅಥವಾ

(ಡಿ) ಶಾಂತಿಯನ್ನು ಪಾಲಿಸುವ ಬಗ್ಗೆ ಅಥವಾ ಒಳ್ಳೆಯ ನಡವಳಿಕೆಯನ್ನು ಇಟ್ಟುಕೊಂಡು ಬರುವ ಬಗ್ಗೆ ಭದ್ರತೆಯನ್ನು ಕೊಡಲು ತಪ್ಪಿದ್ದಕ್ಕಾಗಿ

-ಬಂದೀಖಾನೆಯಲ್ಲಿ ಬಂಧಿಸಿಟ್ಟ ಯಾವನೇ ಬಂದಿಯನ್ನು ಆ ರಾಜ್ಯದಲ್ಲಿ ಯಾವುದೇ ಇತರ ಬಂದೀಖಾನೆಗೆ ಸ್ಥಳಾಂತರಿಸುವುದಕ್ಕಾಗಿ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಉಪಬಂಧಿಸಬಹುದು.

(2) ರಾಜ್ಯ ಸರ್ಕಾರದ ಆದೇಶಗಳಿಗೊಳಪಟ್ಟು ಮತ್ತು ಅದರ ನಿಯಂತ್ರಣದ ಅಡಿಯಲ್ಲಿ ಬಂದೀಖಾನೆಗಳ ಇನ್ಸ್‌ಪೆಕ್ಟರ್ ಜನರಲ್ಲನು ರಾಜ್ಯದಲ್ಲಿನ ಒಂದು ಬಂದೀಖಾನೆಯಲ್ಲಿ ಹಿಂದೆ ಹೇಳಿದಂತೆ ಬಂಧಿಸಿಡಲಾದ ಯಾವನೇ ಬಂದಿಯನ್ನು ಅದೇ ರೀತಿಯಲ್ಲಿ ಆ ರಾಜ್ಯದಲ್ಲಿನ ಯಾವುದೇ ಇತರ ಬಂದೀಖಾನೆಗೆ ಸ್ಥಳಾಂತರಿಸುವುದಕ್ಕಾಗಿ ಏರ್ಪಾಟು ಮಾಡಬಹುದು.

**30. ಮನೋವಿಕಲ ಬಂದಿಗಳೊಂದಿಗೆ ಹೇಗೆ ವ್ಯವಹರಿಸುವುದು,-** (1) ಯಾವುದೇ ನ್ಯಾಯಾಲಯದ ಯಾವುದೇ ಆದೇಶ ಅಥವಾ ಶಿಕ್ಷೆಯ ಆದೇಶದ ಮೇರೆಗೆ ಬಂಧಿಸಿಟ್ಟ ಅಥವಾ ಕಾರಾವಾಸದಲ್ಲಿಟ್ಟ ಯಾವನೇ ವ್ಯಕ್ತಿಯು ಅಸ್ವಸ್ಥಚಿತ್ತನಾಗಿರುವನೆಂದು ರಾಜ್ಯ ಸರ್ಕಾರಕ್ಕೆ ಕಂಡುಬರುವಲ್ಲಿ, ರಾಜ್ಯ ಸರ್ಕಾರವು, ಆ ವ್ಯಕ್ತಿಯು ಅಸ್ವಸ್ಥಚಿತ್ತನಾಗಿರುವವನೆಂದು ನಂಬಲು ಇರುವ ಕಾರಣಗಳನ್ನು ತಿಳಿಸುವ ವಾರೆಂಟಿನ ಮೂಲಕ ರಾಜ್ಯದೊಳಗಿನ ಮನೋವಿಕಲರ ರಕ್ಷಣಾಗೃಹ ಅಥವಾ ಸುರಕ್ಷಿತ ಅಭಿರಕ್ಷೆಯ ಇತರ ಸ್ಥಳಕ್ಕೆ, ಅವನನ್ನು ಬಂಧಿಸಿಡಲು ಅಥವಾ ಕಾರಾವಾಸದಲ್ಲಿಡಲು ಆದೇಶಿಸಲಾಗಿರುವಂಥ ಅಥವಾ ಶಿಕ್ಷೆಗೆ ಗುರಿಪಡಿಸಿರುವಂಥ ಅವಧಿಯ ಉಳಿದ ಕಾಲದವರೆಗೆ ಅಥವಾ ಆ ಅವಧಿಯು ಮುಕ್ತಾಯವಾದ ಮೇಲೆ ಆ ಬಂದಿಯ ಅಥವಾ ಇತರರ ಸುರಕ್ಷತೆಗಾಗಿ ಅವನನ್ನು ವೈದ್ಯಕೀಯ ರಕ್ಷಣೆ ಮತ್ತು ಉಪಚಾರದ ದೃಷ್ಟಿಯಿಂದ ಇನ್ನೂ ಹೆಚ್ಚು ಕಾಲ ಬಂಧಿಸಿಡುವುದು ಅವಶ್ಯವೆಂದು ವೈದ್ಯಾಧಿಕಾರಿಯು ಪ್ರಮಾಣೀಕರಿಸಿದರೆ, ಆಗ ಕಾನೂನಿಗನುಸಾರವಾಗಿ ಅವನನ್ನು

ವಿಮೋಚನೆಗೊಳಿಸುವವರೆಗೆ ರಾಜ್ಯ ಸರ್ಕಾರವು ನಿರ್ದೇಶಿಸುವಂತೆ ಇಟ್ಟುಕೊಂಡಿರಲು ಮತ್ತು ಉಪಚಾರ ಪಡೆಯಲು ಅವನ ಸ್ಥಳಾಂತರಣಕ್ಕೆ ಆದೇಶಿಸಬಹುದು.

(2) ಆ ಬಂದಿಯು ಸ್ವಸ್ಥಚಿತ್ತನಾಗಿದ್ದಾನೆಂದು ರಾಜ್ಯಸರ್ಕಾರಕ್ಕೆ ಕಂಡುಬರುವಲ್ಲಿ ರಾಜ್ಯಸರ್ಕಾರವು, ಅಭಿರಕ್ಷೆಯಲ್ಲಿ ಇಟ್ಟಿರಲು ಬಂದಿಯು ಇನ್ನೂ ಗುರಿಯಾಗಿದ್ದರೆ ಆ ಬಂದಿಯ ಪ್ರಭಾರವನ್ನು ಹೊಂದಿರುವ ವ್ಯಕ್ತಿಗೆ ನಿರ್ದೇಶಿಸಿದ ವಾರಂಟಿನ ಮೂಲಕ ಯಾವ ಬಂದೀಖಾನೆಯಿಂದ ಅವನನ್ನು ಸ್ಥಳಾಂತರಿಸಲಾಯಿತೋ, ಆ ಬಂದೀಖಾನೆಗೆ ಅಥವಾ ರಾಜ್ಯದೊಳಗಿನ ಮತ್ತೊಂದು ಬಂದೀಖಾನೆಗೆ ಅವನನ್ನು ಬಂಧಿಸಿಡಲು ಕಳುಹಿಸತಕ್ಕುದು ಅಥವಾ ಆ ಬಂದಿಯು ಅಭಿರಕ್ಷೆಯಲ್ಲಿಟ್ಟಿರಲು ಇನ್ನು ಮುಂದೆ ಗುರಿಯಾಗಿಲ್ಲದಿದ್ದರೆ ಅವನನ್ನು ವಿಮೋಚನೆಗೊಳಿಸುವಂತೆ ಆದೇಶಿಸತಕ್ಕುದು.

(3) ಮನೋವಿಕಲರ ರಕ್ಷಣಾಗೃಹ ಅಧಿನಿಯಮ, 1858 (1858ರ 36)ರ 9ನೇ ಪ್ರಕರಣದ ಉಪಬಂಧಗಳು, ಯಾವ ಅವಧಿಯವರೆಗೆ ವ್ಯಕ್ತಿಯನ್ನು ಬಂಧಿಸಿಡಲು ಅಥವಾ ಕಾರಾವಾಸದಲ್ಲಿಡಲು ಆದೇಶಿಸಲಾಯಿತೋ ಅಥವಾ ಶಿಕ್ಷೆಗೆ ಗುರಿಪಡಿಸಲಾಯಿತೋ ಆ ಅವಧಿಯು ಮುಕ್ತಾಯವಾದ ತರುವಾಯ (1)ನೇ ಉಪಪ್ರಕರಣದ ಮೇರೆಗೆ ಮನೋವಿಕಲರ ರಕ್ಷಣಾಗೃಹದಲ್ಲಿ ಬಂಧಿಸಿಟ್ಟ ಪ್ರತಿಯೊಬ್ಬ ವ್ಯಕ್ತಿಗೆ ಅನ್ವಯವಾಗತಕ್ಕುದು, ಮತ್ತು ಆ ಉಪಪ್ರಕರಣದ ಮೇರೆಗೆ ಮನೋವಿಕಲ ರಕ್ಷಣಾ ಗೃಹದಲ್ಲಿ ಬಂದಿಯನ್ನು ಬಂಧಿಸಿಟ್ಟಂಥ ಕಾಲವನ್ನು, ಆ ನ್ಯಾಯಾಲಯವು ಅವನು ಅನುಭವಿಸಬೇಕೆಂದು ಆದೇಶಿಸಬಹುದಾಗಿದ್ದ ಅಥವಾ ಶಿಕ್ಷೆಗೆ ಒಳಪಡಿಸಬಹುದಾಗಿದ್ದ ಬಂಧನ ಅಥವಾ ಕಾರಾವಾಸದ ಅವಧಿಯ ಭಾಗವೆಂದು ಪರಿಗಣಿಸತಕ್ಕುದು.

(4) ಯಾವ ಪ್ರಕರಣದಲ್ಲಿ ರಾಜ್ಯದೊಳಗಿನ ಮನೋವಿಕಲರ ರಕ್ಷಣಾಗೃಹಕ್ಕೆ ಅಥವಾ ಸುರಕ್ಷಿತ ಅಭಿರಕ್ಷೆಯ ಇತರ ಸ್ಥಳಕ್ಕೆ ಬಂದಿಯ ಸ್ಥಳಾಂತರಣವನ್ನು ಆದೇಶಿಸಲು (1)ನೇ ಉಪಪ್ರಕರಣದ ಮೇರೆಗೆ ರಾಜ್ಯಸರ್ಕಾರವು ಸಕ್ಷಮವಾಗಿರುವುದೋ ಆ ಯಾವುದೇ ಪ್ರಕರಣದಲ್ಲಿ, ಆ ರಾಜ್ಯಸರ್ಕಾರವು, ಇತರ ರಾಜ್ಯದ ರಾಜ್ಯಸರ್ಕಾರದೊಂದಿಗೆ ಮಾಡಿಕೊಂಡ ಒಪ್ಪಂದದ ಮೂಲಕ ಯಾವುದೇ ಅಂಥ ಇತರ ರಾಜ್ಯದೊಳಗಿನ ಅಥವಾ ಈ ಅಧಿನಿಯಮವು ವ್ಯಾಪ್ತವಾಗದೇ ಇರುವಂಥ ಭಾರತದ ಯಾವುದೇ ಭಾಗದೊಳಗಿನ ಯಾವುದೇ ಅಂಥ ರಕ್ಷಣಾ ಗೃಹಕ್ಕೆ ಅಥವಾ ಸ್ಥಳಕ್ಕೆ ಅವನನ್ನು ಸ್ಥಳಾಂತರಿಸಲು ಆದೇಶಿಸಬಹುದು; ಮತ್ತು (1)ನೇ ಉಪಪ್ರಕರಣದ ಮೇರೆಗೆ ಸ್ಥಳಾಂತರಿಸಿದ ಬಂದಿಯ ಅಭಿರಕ್ಷೆ, ಬಂಧನ, ಬಂಧನಕ್ಕೆ ಕಳುಹಿಸುವುದು ಮತ್ತು ವಿಮೋಚನೆ - ಇವುಗಳಿಗೆ ಸಂಬಂಧಿಸಿದಂತೆ ಈ ಪ್ರಕರಣದ ಉಪಬಂಧಗಳು, ಅವುಗಳನ್ನು ಅನ್ವಯಮಾಡಬಹುದಾದಷ್ಟರ ಮಟ್ಟಿಗೆ ಈ ಉಪಪ್ರಕರಣದ ಮೇರೆಗೆ ಸ್ಥಳಾಂತರಿಸಿದ ಬಂದಿಗೆ ಅನ್ವಯವಾಗತಕ್ಕುದು.

**31. [ಒಂದು ಸ್ಥಳೀಯ ಸರ್ಕಾರದ ಅಡಿಯಲ್ಲಿರುವ ರಾಜ್ಯ ಕ್ಷೇತ್ರಗಳಿಂದ ಇನ್ನೊಂದರ ಅಡಿಯಲ್ಲಿರುವ ರಾಜ್ಯಕ್ಷೇತ್ರಗಳಿಗೆ ಬಂದಿಗಳ ಸ್ಥಳಾಂತರಣ.–** ತಿದ್ದುಪಡಿ ಮಾಡುವ ಅಧಿನಿಯಮ, 1903 (1903ರ 1)ರ 4ನೇ ಪ್ರಕರಣದ IIIನೇ ಅನುಸೂಚಿಯ ಮೂಲಕ ನಿರಸನಗೊಂಡಿದೆ.]

## ಭಾಗ-VII

### ಗಡೀಪಾರು ಶಿಕ್ಷೆಗೆ ಒಳಗಾಗಿರುವ ವ್ಯಕ್ತಿಗಳು

**32. ಗಡೀಪಾರು ಶಿಕ್ಷೆಗೆ ಒಳಗಾಗಿರುವ ವ್ಯಕ್ತಿಗಳನ್ನು ಬಂಧಿಸಿಡುವುದಕ್ಕಾಗಿನ ಸ್ಥಳಗಳನ್ನು ಗೊತ್ತುಪಡಿಸುವುದು ಮತ್ತು ಅಲ್ಲಿಗೆ ಅವರ ಸ್ಥಳಾಂತರಣ.–** (1) ರಾಜ್ಯ ಸರ್ಕಾರವು ಗಡೀಪಾರು ಶಿಕ್ಷೆಗೆ ಒಳಗಾಗಿರುವ ವ್ಯಕ್ತಿಗಳನ್ನು ಕಳುಹಿಸಬೇಕಾಗಿರುವಂಥ ರಾಜ್ಯದ ಒಳಗಿನ ಸ್ಥಳಗಳನ್ನು ಗೊತ್ತುಪಡಿಸಬಹುದು ಮತ್ತು ಆ ರಾಜ್ಯಸರ್ಕಾರವು ಅಥವಾ ರಾಜ್ಯ ಸರ್ಕಾರದಿಂದ ಈ ಬಗ್ಗೆ ಕ್ರಮಬದ್ಧವಾಗಿ ಅಧಿಕೃತನಾದ ಯಾವನೇ ಅಧಿಕಾರಿಯು, ಇನ್ನೊಂದು ಅಪರಾಧಕ್ಕಾಗಿ ಈ ಹಿಂದೆ ಕೊಟ್ಟ ಶಿಕ್ಷೆಯ ಆದೇಶದ ಮೇರೆಗೆ ಈಗಾಗಲೇ ಗಡೀಪಾರನ್ನು ಅನುಭವಿಸುತ್ತಿರುವ ವ್ಯಕ್ತಿಗೆ ಗಡೀಪಾರು ಶಿಕ್ಷೆಯ ಆದೇಶವನ್ನು ಕೊಟ್ಟಾಗ ಹೊರತು, ಅಂಥ ವ್ಯಕ್ತಿಗಳನ್ನು ಹಾಗೆ ಗೊತ್ತುಪಡಿಸಿದ ಸ್ಥಳಗಳಿಗೆ ಸ್ಥಳಾಂತರಿಸುವುದಕ್ಕಾಗಿ ಆದೇಶಗಳನ್ನು ಕೊಡತಕ್ಕುದು.

(2) ರಾಜ್ಯಗಳೊಳಗೆ ಸ್ಥಳಗಳನ್ನು ಗೊತ್ತುಪಡಿಸಲು ಮತ್ತು ಗಡೀಪಾರು ಶಿಕ್ಷೆಗೆ ಒಳಗಾಗಿರುವ ವ್ಯಕ್ತಿಗಳನ್ನು ಆ ಸ್ಥಳಗಳಿಗೆ ಸ್ಥಳಾಂತರಿಸುವುದಕ್ಕಾಗಿ ಆದೇಶವನ್ನು ಮಾಡಲು (1)ನೇ ಉಪಪ್ರಕರಣದ ಮೇರೆಗೆ ಯಾವ ಪ್ರಕರಣದ ಸಂದರ್ಭದಲ್ಲಿ ರಾಜ್ಯಸರ್ಕಾರವು ಸಕ್ಷಮವಾಗಿರುವುದೋ ಆ ಸಂದರ್ಭದಲ್ಲಿ, ಆ ರಾಜ್ಯ ಸರ್ಕಾರವು ಇತರ ರಾಜ್ಯದ ರಾಜ್ಯಸರ್ಕಾರದೊಂದಿಗೆ ಮಾಡಿಕೊಂಡ ಒಪ್ಪಂದದ ಮೂಲಕ ಆ ಯಾವುದೇ ಇತರ ರಾಜ್ಯದಲ್ಲಿರುವ ಅಂಥ ಸ್ಥಳಗಳನ್ನು ಗೊತ್ತುಪಡಿಸಬಹುದು; ಮತ್ತು ಅಂಥದೇ ಒಪ್ಪಂದದ ಮೂಲಕ ಅಂಥ ವ್ಯಕ್ತಿಗಳನ್ನು ಅಲ್ಲಿಗೆ ಸ್ಥಳಾಂತರಿಸುವುದಕ್ಕಾಗಿ ಆದೇಶಗಳನ್ನು ಹೊರಡಿಸಬಹುದು ಅಥವಾ ಆದೇಶಗಳನ್ನು ಹೊರಡಿಸಲು ಯಾವನೇ ಅಧಿಕಾರಿಯನ್ನು ಕ್ರಮಬದ್ಧವಾಗಿ ಅಧಿಕೃತಗೊಳಿಸಬಹುದು.

## ಭಾಗ-VIII

### ಬಂದಿಗಳ ವಿಮೋಚನೆ

**33. ಕ್ಷಮೆಗಾಗಿ ಶಿಫಾರಸು ಮಾಡಿದ ಬಂದಿಯನ್ನು ಉಚ್ಚ ನ್ಯಾಯಾಲಯದ ಆದೇಶದ ಮೂಲಕ ಪುನರ್ ಮುಚ್ಚಳಿಕೆಯ ಮೇಲೆ ಬಿಡುಗಡೆ ಮಾಡುವುದು.–** ಯಾವುದೇ ಉಚ್ಚನ್ಯಾಯಾಲಯವು ಯಾವ ಪ್ರಕರಣದಲ್ಲಿ ಅದು ಯಾವನೇ ಬಂದಿಗೆ ಮುಕ್ತ ಕ್ಷಮೆಯನ್ನು ಕೊಡಲು ಸರ್ಕಾರಕ್ಕೆ ಶಿಫಾರಸು ಮಾಡಿರುವುದೋ ಆ ಯಾವುದೇ ಪ್ರಕರಣದಲ್ಲಿ ಬಂದಿಯು ಅವನದೇ ಆದ ಮುಚ್ಚಳಿಕೆಯ ಮೇಲೆ ಬಿಡುಗಡೆ ಹೊಂದಲು ಅವನಿಗೆ ಅನುಮತಿಸಬಹುದು.

## ಭಾಗ-IX

ಬಂದಿಗಳ ಹಾಜರಾತಿಯನ್ನು ಮತ್ತು ಅವರ ಸಾಕ್ಷ್ಯವನ್ನು ಪಡೆಯುವುದನ್ನು ಅಗತ್ಯಪಡಿಸುವುದಕ್ಕೆ ಸಂಬಂಧಪಟ್ಟ ಉಪಬಂಧಗಳು

34-52 ಬಂದಿಗಳ (ನ್ಯಾಯಾಲಯದಲ್ಲಿ ಹಾಜರಾತಿ) ಅಧಿನಿಯಮ, 1955 (1955ರ 32)ರ 10ನೇ ಪ್ರಕರಣದ ಮೂಲಕ ನಿರಸನಗೊಳಿಸಲಾಗಿದೆ.

53. [ನಿರಸನಗಳು] ನಿರಸನಗೊಳಿಸುವ ಮತ್ತು ತಿದ್ದುಪಡಿಮಾಡುವ ಅಧಿನಿಯಮ, 1914 (1914ರ 10)ರ 3ನೇ ಪ್ರಕರಣ ಮತ್ತು IIನೇ ಅನುಸೂಚಿಯ ಮೂಲಕ ನಿರಸನಗೊಳಿಸಲಾಗಿದೆ.

[ಮೊದಲನೇ ಅನುಸೂಚಿ] ಬಂದಿಗಳ (ನ್ಯಾಯಾಲಯದಲ್ಲಿ ಹಾಜರಾತಿ) ಅಧಿನಿಯಮ, 1955 (1955ರ 32)ರ 10ನೇ ಪ್ರಕರಣದ ಮೂಲಕ ನಿರಸನಗೊಳಿಸಲಾಗಿದೆ.

[ಎರಡನೇ ಅನುಸೂಚಿ] ಅದೇ ಅಧಿನಿಯಮದ 10ನೇ ಪ್ರಕರಣದ ಮೂಲಕ ನಿರಸನಗೊಳಿಸಲಾಗಿದೆ.

[ಮೂರನೇ ಅನುಸೂಚಿ] ನಿರಸನಗೊಳಿಸುವ ಮತ್ತು ತಿದ್ದುಪಡಿ ಮಾಡುವ ಅಧಿನಿಯಮ, 1914 (1914ರ 10)ರ 3ನೇ ಪ್ರಕರಣ ಮತ್ತು IIನೇ ಅನುಸೂಚಿಯ ಮೂಲಕ ನಿರಸನಗೊಳಿಸಲಾಗಿದೆ.

* * * * *